# ಕರ್ನಾಟಕ ಸರ್ಕಾರ

ಸಂಖ್ಯೆ :ಕಂಶಾ/ಆಡಳಿತ/ಅಧಿವೇಶನ-2013/ವಿವ-05/2013-14

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಳಗಾವಿ. ದಿನಾಂಕ :19-11-2013

## ಕಾರ್ಯಾಲಯ ಆದೇಶ

ವಿಷಯ : ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ದಿನಾಂಕ:25-11-2013ರಿಂದ ಜರುಗುವ ಕರ್ನಾಟಕ ವಿಧಾನ ಮಂಡಲದ ಚಳಿಗಾಲದ ಅಧಿವೇಶನಕ್ಕೆ ಆಗಮಿಸುವ ಗಣ್ಯಮಾನ್ಯರಿಗೆ ಹಾಗೂ ಅತಿಥಿಗಳಿಗೆ ವಸತಿ, ಸಾರಿಗೆ, ಊಟೋಪಚಾರ ಮುಂತಾದ ಶಿಷ್ಟಾಚಾರ ವ್ಯವಸ್ಥೆಯನ್ನು ನಿರ್ವಹಿಸಲು ಸಂಪರ್ಕಾಧಿಕಾರಿಗಳನ್ನು ನಿಯುಕ್ತಿಗೊಳಿಸುವ ಕುರಿತು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ದಿನಾಂಕ:25-11-2013ರಿಂದ ಪ್ರಾರಂಭವಾಗಲಿರುವ ಕರ್ನಾಟಕ ವಿಧಾನ ಮಂಡಲದ ಚಳಿಗಾಲದ ಅಧಿವೇಶನಕ್ಕೆ ಆಗಮಿಸುವ ಗಣ್ಯಮಾನ್ಯರಿಗೆ ಹಾಗೂ ಅತಿಥಿಗಳಿಗೆ ವಸತಿ, ಸಾರಿಗೆ, ಊಟೋಪಚಾರ ಮುಂತಾದ ಶಿಷ್ಟಾಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಂಪರ್ಕಾಧಿಕಾರಿಗಳನ್ನು ನಿಯುಕ್ತಿಗೊಳಿಸುವುದು ಅವಶ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಗೆ ತೋರಿಸಿರುವ ತಃಖ್ತೆಯ ಕಾಲಂ (2)ರಲ್ಲಿ ಇರುವ ಗಣ್ಯವ್ಯಕ್ತಿಗಳು/ಅತಿಥಿಗಳಿಗೆ ಕಾಲಂ (3)ರಲ್ಲಿ ತೋರಿಸಿರುವಂತೆ ಸರ್ಕಾರಿ ಅತಿಥಿ ಗೃಹ/ಹೋಟೆಲ್‌ಗಳಲ್ಲಿ ವಸತಿ ವ್ಯವಸ್ಥೆ ಒದಗಿಸಲಾಗಿದ್ದು, ಕಾಲಂ (5)ರಲ್ಲಿ ತೋರಿಸಿರುವ ಅಧಿಕಾರಿಗಳನ್ನು ಸಂಪರ್ಕಾಧಿಕಾರಿ ಎಂದು ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಸಂಪರ್ಕಾಧಿಕಾರಿಗಳು ತಮಗೆ ನಿಯುಕ್ತಿಗೊಳಿಸಿದ ಗಣ್ಯವ್ಯಕ್ತಿಗಳು/ಅತಿಥಿಗಳು ತಂಗುವ ಸರ್ಕಾರಿ ಅತಿಥಿ ಗೃಹ/ಹೋಟೆಲ್‌ಗಳಲ್ಲಿ ದಿನಾಂಕ:24-11-2013ರಿಂದ ಉಪಸ್ಥಿತರಿದ್ದು, ಗಣ್ಯವ್ಯಕ್ತಿಗಳನ್ನು/ಅತಿಥಿಗಳನ್ನು ಸಂಪರ್ಕಿಸಿ ಅವರಿಗೆ ಒದಗಿಸಲಾದ ವಸತಿ ವ್ಯವಸ್ಥೆಯ ಬಗ್ಗೆ

19/11

ಮಾಹಿತಿ ನೀಡುವುದು, ಅಧಿವೇಶನವು ಮುಗಿಯುವವರೆಗೆ ಗಣ್ಯವ್ಯಕ್ತಿಗಳನ್ನು/ಅತಿಥಿಗಳ ಜೊತೆಗೆ ಸತತವಾಗಿ ಸಂಪರ್ಕದಲ್ಲಿದ್ದು ಅವರಿಗೆ ವಸತಿ, ಊಟೋಪಚಾರ ಇತರೆ ಶಿಷ್ಟಾಚಾರ ಸೌಲಭ್ಯಗಳಲ್ಲಿ ಯಾವುದೇ ತೊಂದರೆ ಉದ್ಭವಿಸದಂತೆ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ.

ಸುವರ್ಣ ಸೌಧ, ಬೆಳಗಾವಿ : ಕರ್ನಾಟಕ ವಿಧಾನ ಮಂಡಲ ಚಳಿಗಾಲದ ಅಧಿವೇಶನ, 2013

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಹೊಸ ಅತಿಥಿ ಗೃಹ, ಬೆಳಗಾವಿ

ಸಮಗ್ರ ಉಸ್ತುವಾರಿ :1. ಶ್ರೀ ಶ್ರೀ ಪಿ. ವಿ. ದೇಸಾಯಿ, ಯೋಜನಾ ಅಂದಾಜು & ಮೌಲ್ಯಮಾಪನ ಅಧಿಕಾರಿ, ಜಿಲ್ಲಾ ಪಂಚಾಯತ, ಬೆಳಗಾವಿ 9480854011

2.ಶ್ರೀ ಎಚ್.ಕೆ.ವಂಟಗುಡಿ ಸಹಾಯಕ ಕಾರ್ಯನಿರ್ವಾಹಕ ಅಬಿಯಂತರರು, ಪಿ.ಆರ್.ಇ. ಉಪವಿಭಾಗ, ಬೈಲಹೊಂಗಲ 9480854108

| ಕ್ರಸಂ | ವಸತಿ ಸೌಲಭ್ಯ ಒದಗಿಸಲಾದ ಗಣ್ಯ ವ್ಯಕ್ತಿಗಳ ವಿವರ | ವಸತಿ ಸೌಲಭ್ಯ ಒದಗಿಸಲಾದ ಸ್ಥಳ | ಕೊಠಡಿ ಸಂಖ್ಯೆ | ಸಂಪರ್ಕಾಧಿಕಾರಿ ಹೆಸರು, ಹುದ್ದೆ ಮತ್ತು ದೂರವಾಣಿ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ಶ್ರೀ ಕಾಗೋಡು ತಿಮ್ಮಪ್ಪ ಮಾನ್ಯ ಸಭಾಧ್ಯಕ್ಷರು, ವಿಧಾನ ಸಭೆ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಹೊಸ ಅತಿಥಿ ಗೃಹ, ಬೆಳಗಾವಿ | ಎಸ್ 08/09 | ಶ್ರೀ ಎ. ಎಸ್. ಕಾಂಬಳೆ ನಗರ & ಗ್ರಾಂಮಾತರ ಯೋಜನಾ ಉಪ ನಿರ್ದೇಶಕರು, ಮಹಾನಗರ ಪಾಲಿಕೆ, ಬೆಳಗಾವಿ 9448437336 |
| 2 | ಶ್ರೀ ಡಿ. ಎಚ್. ಶಂಕರಮೂರ್ತಿ ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಹೊಸ ಅತಿಥಿ ಗೃಹ, ಬೆಳಗಾವಿ | ಎಫ್ 08/09 | ಶ್ರೀ ಎಸ್ ಬಿ ತುರಚಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ, ಜಿಆರ್‌ಸಿ ಉಪವಿಭಾಗ ನಂ 1 ಹಿಡಕಲ್ ಡ್ಯಾಂ 9448160830 |

(signature) 19/11

ಈ ಮೇಲ್ಕಾಣಿಸಿದ ತಖ್ತೆಯ ಕಾಲಂ ನಂ 5 ರಲ್ಲಿಯ ಸಂಪರ್ಕ ಅಧಿಕಾರಿಗಳು ತಮಗೆ ವಹಿಸಿಕೊಟ್ಟ ಗಣ್ಯವ್ಯಕ್ತಿಗಳ ವಸತಿ , ಸಾರಿಗೆ , ಶಿಷ್ಠಾಚಾರ ವ್ಯವಸ್ಥೆಗಳನ್ನು ಸಮರ್ಪಕವಾಗಿ ದಿನಾಂಕ:24-11-2013 ರಿಂದ 7-12-2013ರವರೆಗೆ ಅಥವಾ ಅಧಿವೇಶನ ಪೂರ್ಣಗೊಳ್ಳುವವರೆಗೆ ನಿರ್ವಹಿಸಲು ಆದೇಶಿಸಿದೆ. ಈ ಕುರಿತು ಸಂಬಂಧಿಸಿದ ಗಣ್ಯರಿಗೆ ಮಾಹಿತಿಗಳನ್ನು ನೀಡಲೂ ಸಹ ಆದೇಶಿಸಿದೆ. ಸಂಪರ್ಕಾಧಿಕಾರಿಗಳು ತಕ್ಷಣವೇ ಸಂಬಂಧಿಸಿದ ವಸತಿ ಗೃಹ / ಹೊಟೇಲ್ ಕೊಠಡಿಗಳನ್ನು ಖುದ್ದಾಗಿ ಪರಿಶೀಲಿಸಿ ವಾಸ್ತವ್ಯಕ್ಕೆ ಪರಿಪೂರ್ಣ ಇದ್ದ ಬಗ್ಗೆ ಖಚಿತಪಡಿಸಿಕೊಂಡು ಜಿಲ್ಲಾಧಿಕಾರಿಗಳಿಗೆ / ಅಪರ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡುವುದು. ಮತ್ತು ನಿಗದಿಪಡಿಸಿದ ದಿನಾಂಕಗಳಂದು ಸದರೀ ಕೊಠಡಿಗಳನ್ನು ಜಿಲ್ಲಾಡಳಿತದ ವಶಕ್ಕೆ ತೆಗೆದುಕೊಳ್ಳಲು ಕ್ರಮ ಕೈಗೊಳ್ಳುವುದು. ತುರ್ತು ಸಂಧರ್ಭಗಳಲ್ಲಿ ಅಗತ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ದೂರವಾಣಿ ಸಂಖ್ಯೆ 0831-2407275 ಮತ್ತು 2407274 ನೇದ್ದವುಗಳನ್ನು ಸಂಪರ್ಕಿಸುವುದು.

ಸಹಿ/-

(ಎನ್ ಜಯರಾಮ್)

ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ

ಪ್ರತಿ ಮಾಹಿತಿ ಕುರಿತು ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಬೆಳಗಾವಿ ಇವರಿಗೆ ಗೌರವಗಳೊಂದಿಗೆ ಸಲ್ಲಿಸಿದೆ.

ಪ್ರತಿ ಮಾಹಿತಿ ಕುರಿತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬೆಳಗಾವಿ ಜಿಲ್ಲೆ

ಪ್ರತಿಗಳು ಸೂಕ್ತ ಕ್ರಮಕ್ಕಾಗಿ, 1) ಸಂಬಂಧಿಸಿದ ಎಲ್ಲ ಸಂಪರ್ಕಾಧಿಕಾರಿಗಳಿಗೆ,

2) ವಸತಿ ಸಮಿತಿಗೆ

3) ಸಾರಿಗೆ ಸಮಿತಿಗೆ

4) ಆಹಾರ ಸಮಿತಿಗೆ

5) ಗುರುತಿನ ಚೀಟಿ ವಿತರಣಾ ಸಮಿತಿಗೆ

6) ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರಿಗೆ ಮಾಹಿತಿ ಕುರಿತು.

19/11

ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ